"ಈ ಶಾಲೆಯಲ್ಲಿ ಓದಿದವರು ಎಂಜಿನಿಯರ್, ವೈದ್ಯರು, ಪೊಲೀಸ್ ಅಧಿಕಾರಿಗಳು ಹಾಗೂ ಲೆಕ್ಕಿಗರಾಗಿದ್ದಾರೆ"

ಶಿವಪ್ಪ ಸಜ್ಜನ್, ಶಂಕರಗೌಡ ಪಾಟೀಲ್, ರಾಜೇಶ್ ಮುಜವರ್
ಶಿವಕುಮಾರ್, ಕಾಂತೇಶ್, ಶ್ರೀಧರ್ ಮಲ್ಜಿ, ಅಣ್ಣಪ್ಪ ಗೌಡರ್ ಪಾಟೀಲ್
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮರಲಭಾವಿ
ಸುರಪುರ ಬ್ಲಾಕ್, ಯಾದಗಿರಿ ಜಿಲ್ಲೆ, ಕರ್ನಾಟಕ

ಮರಲಭಾವಿ 1,800 ಜನಸಂಖ್ಯೆ ಇರುವ ಗ್ರಾಮ. ಇದರಲ್ಲಿ ಶೇ. 80ಕ್ಕೂ ಅಧಿಕ ಕುರುಬ ಸಮುದಾಯದವರು, ಉಳಿದವರು ಪರಿಶಿಷ್ಟ ಜಾತಿಯವರು ಮತ್ತು ಬೆರಳೆಣಿಕೆಯ ಮರಾಠ ಕುಟುಂಬಗಳಿವೆ. ಸುರಪುರ ತಾಲೂಕಿನ ಹುಣಸಗಿ ಕ್ಷೇತ್ರದಲ್ಲಿರುವ ಈ ಗ್ರಾಮ, ಪಕ್ಕದ ವಿಜಯಪುರ ಜಿಲ್ಲೆಯಿಂದ ಹೆಚ್ಚೇನೂ ದೂರವಿಲ್ಲ. ಸ್ವಂತ ಭೂಮಿ ಹೊಂದಿರುವವರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದು, ಉಳಿದವರು ಕೂಲಿ ಕಾರ್ಮಿಕರಾಗಿ ಜೀವನ ಸಾಗಿಸುತ್ತಾರೆ; ಇನ್ನು ಕೆಲವರು ಕೆಲಸ ಹುಡುಕಿಕೊಂಡು ವಲಸೆ ಹೋಗುತ್ತಾರೆ. 35 ವರ್ಷ ದಾಟಿದವರಲ್ಲಿ ಶೇ.60ರಷ್ಟು ಮಂದಿ ಅನಕ್ಷರಸ್ಥರಿದ್ದಾರೆ. ಶೇ.70ರಷ್ಟು ಮಂದಿ ಮನೆಯಲ್ಲೇ ಶೌಚಾಲಯ ನಿರ್ಮಿಸಿಕೊಂಡಿದ್ದರೂ ಬಯಲು ಶೌಚ ಮುಂದುವರಿದಿದೆ. ಈ ಗ್ರಾಮದ ಕಳಂಕವಾಗಿದ್ದ ಬಾಲ್ಯ ವಿವಾಹ ಈಗ ಬಹುತೇಕ ಕಣ್ಮರೆಯಾಗಿದೆ ಎಂಬುದು ಸಮಾಧಾನದ ಸಂಗತಿ.

ಇಂಥ ಸನ್ನಿವೇಶದಲ್ಲಿ ಮರಳಭಾವಿಯ ಜಿಪಿಎಚ್ಎಸ್ ಈ ಪ್ರದೇಶದ ಶ್ರೇಯಸ್ಕರವಾದ ತಾಣವಾಗಿದೆ. ಭೌತಿಕವಾಗಿ ಆಕರ್ಷಕವಾಗಿರುವ, ಸುವ್ಯವಸ್ಥಿತ ಮತ್ತು ಸ್ವಚ್ಛವಾದ ಶಾಲೆಯು ಪ್ರತಿಯೊಬ್ಬ ನೋಡುಗನನ್ನೂ ಕೈಬೀಸಿ ಕರೆಯುತ್ತದೆ. ಪರಸ್ಪರ ಹೊಂದಿಕೊಂಡು ಕೆಲಸ ಮಾಡುವ ಶಿಕ್ಷಕರ ತಂಡ ಇಲ್ಲಿದೆ. ಉತ್ತಮ ಕಲಿಕೆಯ ದಾಖಲೆಯಿದ್ದು, ತೇರ್ಗಡೆಯಾದ ಮಕ್ಕಳು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದು, ಜೀವನದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಏಳು ಶಿಕ್ಷಕರ ನಿರಂತರ ಪ್ರಯತ್ನದಿಂದ ಇಂಥ ಶಾಲೆ ಸೃಷ್ಟಿಯಾಗಿದ್ದು, ಅದರ ಅಧ್ಯಯನ ಒಂದು ಆಸಕ್ತಿದಾಯಕ ವಿಷಯವೇ ಸರಿ.

1990ರಲ್ಲಿ ಶಿಕ್ಷಣ ಇಲಾಖೆಯನ್ನು ಸೇರಿದ ಶಿವಪ್ಪ ಸಜ್ಜನ್ 2007ರಿಂದ ಇಲ್ಲಿ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗಿಂತ ಆರು ವರ್ಷ ಕಿರಿಯರಾದ ಶಂಕರಗೌಡ ಪಾಟೀಲ್ ಸುಮಾರು ಅದೇ ಸಮಯದಲ್ಲಿ ಶಾಲೆಗೆ ಸೇರಿದರು. 20 ವರ್ಷ

ಬೋಧನೆ ಅನುಭವ ಇರುವ ರಾಜೇಶ್ ಮುಜವರ್ 2012ರಲ್ಲಿ ಬಂದರು. ಕಿರಿಯ ಶಿಕ್ಷಕಕರಲ್ಲಿ ಒಬ್ಬರಾದ ಶಿವಕುಮಾರ್ 2010ರಿಂದ ಇಲ್ಲಿದ್ದಾರೆ: ಸಮಾಜ ವಿಜ್ಞಾನ ಶಿಕ್ಷಕ ಕಾಂತೇಶ್ 2007ರಲ್ಲಿ ಈ ಶಾಲೆಯಲ್ಲಿ ತಮ್ಮ ಶೈಕ್ಷಣಿಕ ಜೀವನ ಆರಂಭಿಸಿದರು; ಇಂಗ್ಲಿಷ್ ಶಿಕ್ಷಕ ಶ್ರೀಧರ್ ಮಲ್ಜಿ ಅವರನ್ನು ಇತ್ತೀಚೆಗೆ ಮರಲಭಾವಿಗೆ ನೇಮಿಸಲಾಗಿದೆ. ಆಶ್ಚರ್ಯಕರ ಸಂಗತಿಯೆಂದರೆ, ಅಣ್ಣಪ್ಪಗೌಡ ಪಾಟೀಲ್ ನಲಿ-ಕಲಿ ಬೋಧನೆ ಕಲೆಯಲ್ಲಿ ತರಬೇತಿ ಪಡೆದವರು. 2003ರವರೆಗೆ ನಾಲ್ಕು ವರ್ಷ ಇಲ್ಲಿ ಕಾರ್ಯನಿರ್ವಹಿಸಿ, ಅನಂತರ ಸುರಪುರದ ಇನ್ನೊಂದು ಶಾಲೆಯಲ್ಲಿ 13 ವರ್ಷ ಕಲಿಸಿ, ಹಿಂದಿನ ವರ್ಷವಷ್ಟೇ ಮರಲಭಾವಿಗೆ ಮರಳಿದ್ದಾರೆ. ಈ ಎಲ್ಲ ಶಿಕ್ಷಕರು ಪಕ್ಕದ ಪಟ್ಟಣಗಳಾದ ಹುಣಸಗಿ ಇಲ್ಲವೇ ತಾಳಿಕೋಟೆಯಲ್ಲಿ ವಾಸ ಮಾಡುತ್ತಿದ್ದು, ಮೋಟಾರ್ ಬೈಕ್‌ನಲ್ಲಿ ಶಾಲೆಗೆ ಬರುತ್ತಾರೆ.

ಮುಖ್ಯ ಶಿಕ್ಷಕ ಶಿವಪ್ಪ ಸಜ್ಜನ್ ಮತ್ತು ಶಿಕ್ಷಕರಾದ ಕಾಂತೇಶ್ ಹಾಗೂ ಅಣ್ಣಪ್ಪ ಗೌಡರ್ ದೀರ್ಘ ಕಾಲದಿಂದ 'ಸಿಎಫ್‌ಎಸ್‌ಐ' ಜತೆಗೆ ಸಂಬಂಧ ಹೊಂದಿದ್ದು, ಕಾರ್ಯಕ್ರಮದ ಅಂಗವಾಗಿ ಹಲವು ಸಾಮರ್ಥ್ಯ ನಿರ್ಮಾಣ ಕೋರ್ಸ್‌ಗಳಲ್ಲಿ ಪಾಲ್ಗೊಂಡಿದ್ದಾರೆ. ಇನ್ನಿತರರು ಮರಲಭಾವಿಯ ಜಿಪಿಎಚ್‌ಎಸ್‌ಗೆ ಸೇರಿದ ಬಳಿಕ, ಇತ್ತೀಚೆಗೆ ಸಿಎಫ್‌ಎಸ್‌ಐನ ಸಂಪರ್ಕ ಬೆಳೆಸಿಕೊಂಡಿದ್ದಾರೆ. ಸಜ್ಜನ್ ನಲಿ-ಕಲಿಯಲ್ಲಿ ಬೋಧನೆ ಕಲೆಯಲ್ಲೂ ತರಬೇತಿ ಪಡೆದಿದ್ದು, ಉಳಿದವರು ವಿಷಯಕ್ಕೆ ಸಂಬಂಧಿಸಿದ ಕಾರ್ಯಗಾರಗಳು ಹಾಗೂ ಕೋರ್ಸ್‌ಗಳಲ್ಲಿ ಪಾಲ್ಗೊಂಡಿದ್ದಾರೆ. ಕೆಲವು ವರ್ಷಗಳ ಹಿಂದೆ ಈ ಶಾಲೆಯಲ್ಲಿ ಮಕ್ಕಳ ಪ್ರತಿಭೆಯನ್ನು ಸಮುದಾಯದ ಸದಸ್ಯರು ಹಾಗೂ ಪೋಷಕರಿಗೆ ಪ್ರದರ್ಶಿಸಲು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಮೇಳವನ್ನು ಕೂಡಾ ಆಯೋಜಿಸಲಾಗಿತ್ತು. ಮಕ್ಕಳು ತಮ್ಮ ಗ್ರಾಮ-ಪ್ರಾಂತ್ಯದ ಚರಿತ್ರೆ ಕುರಿತು ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಿದ್ದರು. ಗ್ರಾಮದ ಹಿರಿಯರ ಜೊತೆ ಮಾತನಾಡಿ, ಸ್ಥಳೀಯ ಸಂಶೋಧನೆಯಿಂದ ಸಾಕ್ಷ್ಯವನ್ನು ಸಂಗ್ರಹಿಸಿ ದಾಖಲಿಸಿದ್ದರು.

ಶಾಲೆಯಲ್ಲಿ 193 ಮಕ್ಕಳಿದ್ದು, ಹಾಜರಿ ಯಾವಾಗಲೂ ಶೇ.80-85ಕ್ಕಿಂತ ಹೆಚ್ಚು ಇರುತ್ತದೆ. ಕೆಲ ವರ್ಷಗಳ ಹಿಂದೆ ಹಾಜರಿ ತೀರ ಕಡಿಮೆ ಇತ್ತು. ಶಿಕ್ಷಕರು ಪೋಷಕರೊಂದಿಗೆ ನಡೆಸಿದ ನಿರಂತರ ಸಂಪರ್ಕ ಪರಿಣಾಮ ಬೀರಿದೆ. ಕಾಲಕ್ರಮೇಣ ಪೋಷಕರು ಶಾಲೆ ಮೇಲೆ ನಂಬಿಕೆಯನ್ನೂ ಮಕ್ಕಳಿಗೆ ಶಾಲೆಯಲ್ಲಿ ಉತ್ತಮ ವಿದ್ಯಾಭ್ಯಾಸ ದೊರೆಯುತ್ತದೆ ಎನ್ನುವ ವಿಶ್ವಾಸವನ್ನೂ ಬೆಳೆಸಿಕೊಂಡರು. ಈಗ ಪೋಷಕರು ವಲಸೆ ಹೋಗುವಾಗ ಮಕ್ಕಳಿಗೆ ಶಾಲೆ ತಪ್ಪಿಹೋಗದಂತೆ ನೋಡಿಕೊಳ್ಳಲು, ತಮ್ಮ ತಂದೆ-ತಾಯಿ ಬಳಿ ಬಿಟ್ಟುಹೋಗುತ್ತಾರೆ. ಊರಿನ ಯಾವುದೇ ಮಗು ಖಾಸಗಿ ಶಾಲೆಗೆ ಹೋಗುವುದಿಲ್ಲ, ಎಲ್ಲರೂ ಮರಳಭಾವಿಯ ಜಿಎಚ್‌ಪಿಎಸ್‌ಗೆ ದಾಖಲಾಗಿದ್ದಾರೆ.

ಈ ಶಾಲೆಯನ್ನು ಅದರ ಗುಣವಿಶೇಷಗಳ ಆಧಾರದಲ್ಲಿ ಮೌಲ್ಯಮಾಪನ ಮಾಡಬೇಕು ಎಂದಾದರೆ ಪಟ್ಟಿಯಲ್ಲಿನ ಅನೇಕ ಅಂಶಗಳಿಗೆ ಸರಿಯುತ್ತರವನ್ನು ಗುರುತು ಮಾಡಬಹುದು. ಮನಸೆಳೆಯುವ ಪರಿಸರ, ಶುಚಿಯಾದ ಮತ್ತು ಸುಸ್ಥಿತಿಯಲ್ಲಿರುವ ಶೌಚಾಲಯಗಳು, ಕುಡಿಯಲು ಮತ್ತು ಸ್ವಚ್ಛಗೊಳಿಸಲು, ಗಿಡಗಳಿಗೆ

ನೀರುಣಿಸಲು ಪ್ರತ್ಯೇಕ ವ್ಯವಸ್ಥೆ, ಸುಂದರವಾದ ಕೈತೋಟ, ಪ್ರಾರ್ಥನೆ ಹಾಗೂ ಇನ್ನಿತರ ಚಟುವಟಿಕೆಗಳಿಗೆ ಸಾಕಷ್ಟು ಸ್ಥಳಾವಕಾಶ ಇವೆಲ್ಲವೂ ಇದೆ. ಎಲ್ಲ ಶಿಕ್ಷಕರೂ ಶಾಲೆ ಆರಂಭಕ್ಕೆ ಒಂದು ಗಂಟೆ ಮುನ್ನ, ಬೆಳಗ್ಗೆ 8.30ಕ್ಕೆ ಬರುತ್ತಾರೆ. ಆಗ ಅವರು, ಹೆಚ್ಚು ನೆರವು ಅಗತ್ಯವಿರುವ ಮಕ್ಕಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುತ್ತಾರೆ. ಆರ್‌ಟಿಇ (2009ರಿಂದ) ಪ್ರಕಾರ, ಮಕ್ಕಳನ್ನು ದಂಡಿಸುವುದು ಶಿಕ್ಷಾರ್ಹ ಅಪರಾಧ. ಆದರೆ, ಮರಲಭಾವಿ ಶಾಲೆಯಲ್ಲಿ ಯಾವತ್ತೂ ದಂಡನೆ ಪದ್ಧತಿಯೇ ಇರಲಿಲ್ಲ. ಇಲ್ಲಿನ ಶಿಕ್ಷಕರು ಮಕ್ಕಳಲ್ಲಿ ಸ್ವಾತಂತ್ರ್ಯ, ಜವಾಬ್ದಾರಿ ಹಾಗೂ ಸ್ವಾವಲಂಬನೆಯ ಸಂಸ್ಕೃತಿಯೊಂದನ್ನು ಭದ್ರವಾಗಿ ಸ್ಥಾಪನೆಗೊಂಡಿರುವ ಪದ್ಧತಿ ಹಾಗೂ ಪ್ರಕ್ರಿಯೆಗಳ ಮೂಲಕ ಸೃಷ್ಟಿಸಿದ್ದಾರೆ. ಮೂರು ಮತ್ತು ನಂತರದ ತರಗತಿಗಳ ವಿದ್ಯಾರ್ಥಿಗಳು ಆಯ್ಕೆ ಮಾಡಿದ ಮಕ್ಕಳ ಸಚಿವ ಸಂಪುಟವಿದೆ. ಬಲು ವ್ಯವಸ್ಥಿತವಾಗಿ ಆಯೋಜಿಸಿದ ಬೆಳಗಿನ ಪ್ರಾರ್ಥನೆ ವೇಳೆ ವಿದ್ಯಾರ್ಥಿಗಳು ಸುದ್ದಿ ವಾಚನ, ಪ್ರಶ್ನಾವಳಿ(ಕ್ವಿಜ್) ಮತ್ತು ವಚನ ಗಾಯನ ನಡೆಸಿ ಕೊಡುತ್ತಾರೆ. ಮಕ್ಕಳ ಬ್ಯಾಂಕ್ ಸ್ಥಾಪಿಸಿ ಪಾಸ್‌ಬುಕ್ ವಿತರಿಸುವ ಮೂಲಕ ಸ್ವಂತ ನಿರ್ಧಾರ ಕೈಗೊಳ್ಳುವ ಹಾಗೂ ಅಗತ್ಯ ವಸ್ತುಗಳನ್ನು ಖರೀದಿಸುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸಲಾಗುತ್ತದೆ. ಗ್ರಂಥಾಲಯದ ಸಕ್ರಿಯ ಬಳಕೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಅಲ್ಲಿ ಇರಿಸಿರುವ ರಿಜಿಸ್ಟರ್ ವಾಚಕರ ಆಸಕ್ತಿ ಹಾಗೂ ಯಾರು ಪುಸ್ತಕ ಓದುತ್ತಾರೆ ಎನ್ನುವುದನ್ನು ತೋರಿಸುತ್ತದೆ. ವಾಚನಾಭಿರುಚಿ ಉಂಟುಮಾಡಲು ಹಾಗೂ ಹೆಚ್ಚುಹೆಚ್ಚು ಮಕ್ಕಳು ಪುಸ್ತಕ ಕೊಂಡೊಯ್ಯುವುದನ್ನು ಉತ್ತೇಜಿಸಲು, ಪ್ರತಿದಿನ ಬೆಳಗ್ಗೆ ಪ್ರಾರ್ಥನೆ ವೇಳೆ 6 ಮತ್ತು 7ನೇ ತರಗತಿ ವಿದ್ಯಾರ್ಥಿಗಳು ಹೊಸ ಪುಸ್ತಕವೊಂದನ್ನು ಪರಿಚಯಿಸುತ್ತಾರೆ.

ಮಕ್ಕಳ ಸಂಪುಟ ಪ್ರತಿ ಶುಕ್ರವಾರ ಮಧ್ಯಾಹ್ನ 3.30 ರಿಂದ 4.30ರ ಅವಧಿಯಲ್ಲಿ ಗಾಯನ, ನೃತ್ಯ, ನಾಟಕ, ಮಿಮಿಕ್ರಿ ಹಾಗೂ ವಚನ ಗಾಯನ ಒಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡುತ್ತದೆ. ಶಾಲೆಯ ಖೋಖೋ ಮತ್ತು ಕಬಡ್ಡಿ ತಂಡ ಬ್ಲಾಕ್‌ನ ಹಂತಕ್ಕೆ ಆಯ್ಕೆಯಾಗಿದ್ದು, ಶಾಲೆಯ ಮಕ್ಕಳು ಇಲಾಖೆ ನಡೆಸುವ ಕಲಿಕೋತ್ಸವದಲ್ಲಿ ಕಂಠಪಾಟ, ಚರ್ಚಾಕೂಟ ಮತ್ತು ಬರಹ ಸ್ಪರ್ಧೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಬಹುಮಾನ ಗಳಿಸಿದ್ದಾರೆ. ಪಠ್ಯಕ್ರಮದ ಸಾಕಷ್ಟು ಭಾಗ ಶೋಧನೆ ಮತ್ತು ಪ್ರಶ್ನಿಸುವಿಕೆಯನ್ನು ಉತ್ತೇಜಿಸುವ ಪ್ರಾಜೆಕ್ಟ್‌ಗಳನ್ನು ಒಳಗೊಂಡಿದೆ. ವಿದ್ಯಾರ್ಥಿಗಳು ಸ್ಥಳೀಯ ಚರಿತ್ರೆಯಿಂದ ಹಿಡಿದು ಪಕ್ಕದ ತಿಂಥಿಣಿಯಲ್ಲಿ ಇರುವ ಜೈವಿಕ ಉದ್ಯಾನದ ಅಧ್ಯಯನ ಅಥವಾ, ಕೃಷಿ ಕಾಲೇಜಿನ ಸಂಶೋಧನಾ ಕೇಂದ್ರಕ್ಕೆ ಭೇಟಿ ಅಥವಾ ಗ್ರಾಮದ ಸಂತೆ ವೀಕ್ಷಣೆಯಂಥ ನಾನಾ ಆಸಕ್ತಿಕರ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುತ್ತಾರೆ.

ಮಕ್ಕಳಿಗೆ ಎಳವೆಯಿಂದಲೇ ಶಿಕ್ಷಣ ನೀಡಬೇಕೆಂಬ ತೀವ್ರ ಕಾಳಜಿ ಹೊಂದಿರುವ ಮುಖ್ಯ ಶಿಕ್ಷಕ ಸಜ್ಜನ್, ಒಂದರಿಂದ ನಾಲ್ಕನೇ ತರಗತಿ ಮಕ್ಕಳ ಉಸ್ತುವಾರಿಯನ್ನು ತಾವೇ ನೋಡಿಕೊಂಡು ಆ ತರಗತಿಗಳ ಪಾಠಗಳನ್ನೂ ತಾವೇ ಮಾಡುತ್ತಾರೆ. ನಲಿ–ಕಲಿ ಬೋಧನಾ ಕ್ರಮದಲ್ಲಿ ತರಬೇತಿ ಪಡೆದಿರುವ ಅವರು, ರಾಜ್ಯದಲ್ಲಿ ಆ ಶಿಕ್ಷಣ ಕ್ರಮದ ಅತ್ಯುತ್ತಮ ಶಿಕ್ಷಕರಲ್ಲಿ ಒಬ್ಬರು ಎಂದು ಪರಿಗಣಿತರಾಗಿದ್ದಾರೆ. ಕನ್ನಡ ಟಿವಿ ಚಾನೆಲ್

‘ಚಂದನ’ದಿಂದ ಉತ್ತಮ ಶಿಕ್ಷಕ ಎಂಬ ಮನ್ನಣೆಯನ್ನೂ ಪಡೆದಿದ್ದಾರೆ. ಮಕ್ಕಳೊಡನೆ ಕೆಲವು ನಿಮಿಷ ಕಾಲ ಕಳೆದರೆ, ಅವರನ್ನು ಅರ್ಥ ಮಾಡಿಕೊಳ್ಳುವುದಲ್ಲದೆ, ಪಠ್ಯಪುಸ್ತಕವನ್ನೂ ಮೀರಿ ಅವರ ಕಲಿಯುವ ಸಾಮರ್ಥ್ಯ ಎಷ್ಟಿದೆ ಎನ್ನುವುದು ಗೊತ್ತಾಗಲಿದೆ. ಮಕ್ಕಳಿಗೆ ಮೂಲಭೂತ ಪರಿಕಲ್ಪನೆಗಳನ್ನು ಸರಿಯಾಗಿ ಅರ್ಥ ಮಾಡಿಸಲು ಒತ್ತು ನೀಡುವುದರಿಂದ, ಹೈಸ್ಕೂಲ್‌ನಲ್ಲಿ ಮಕ್ಕಳು ಉತ್ತಮ ಸಾಧನೆ ಮಾಡಲು ಸಹಾಯಕವಾಗುವುದು ಎಂದು ಸಜ್ಜನ್ ನಂಬುತ್ತಾರೆ. ಇತ್ತೀಚೆಗೆ ‘ಕೆಎಸ್‌ಕ್ಯುಎಎಸಿ’ ಮೌಲ್ಯಮಾಪನದಲ್ಲಿ ನೀಡಲಾಗಿರುವ ಉತ್ತಮ ರ್‍ಯಾಂಕ್, ವಿದ್ಯಾರ್ಥಿಗಳ ಕಲಿಕಾ ಸಾಧನೆಗೆ ಮತ್ತು ಮರಲಭಾವಿ ಶಾಲೆ ನೀಡುತ್ತಿರುವ ಗುಣಮಟ್ಟದ ಶಿಕ್ಷಣಕ್ಕೆ ಹಿಡಿದ ಕನ್ನಡಿಯಾಗಿದೆ. ವಿಜ್ಞಾನ ಶಿಕ್ಷಕ ಕಾಂತೇಶ್ ಪ್ರತಿ ಬುಧವಾರ ವಿಜ್ಞಾನದ ಪ್ರಯೋಗವೊಂದನ್ನು ನಡೆಸುತ್ತಾರೆ. ವಿದ್ಯಾರ್ಥಿಗಳಲ್ಲಿ ವಿಷಯದ ಕುರಿತು ಆಸಕ್ತಿ ಹುಟ್ಟಿಸುವುದು ಮತ್ತು ಶೋಧಕ ಮನೋಭಾವವನ್ನು ಉತ್ತೇಜಿಸುವುದು ಈ ಆಸಕ್ತಿಕರ ಉಪಕ್ರಮದ ಉದ್ದೇಶ. ಕಾಂತೇಶ್ ಟಿಎಲ್‌ಸಿಗೆ ನಿಯಮಿತವಾಗಿ ಭೇಟಿ ನೀಡುತ್ತಿದ್ದು, ಶಾಲೆಯಲ್ಲಿ ವಾರದ ಪ್ರಯೋಗ ನಡೆಸಲು ಅಲ್ಲಿಂದ ಸಾಧನಗಳನ್ನು ತರುತ್ತಾರೆ.

ಮರಲಭಾವಿಯ ಜಿಎಚ್‌ಪಿಎಸ್‌ನಿಂದ ತೇರ್ಗಡೆ ಹೊಂದುವ ಹೆಚ್ಚಿನ ಮಕ್ಕಳು ನಂತರ ಪಕ್ಕದ ಜಿಲ್ಲೆಯಾದ ವಿಜಯಪುರದ ಸಾಲೋದಗಿಯ ಸರ್ಕಾರಿ ಹೈಸ್ಕೂಲ್‌ಗೆ ಹೋಗುತ್ತಾರೆ. ಸಜ್ಜನ್ ತಾವೇ ಮಕ್ಕಳನ್ನು ಹೈಸ್ಕೂಲ್‌ಗೆ ಕರೆದೊಯ್ದು ಪ್ರವೇಶ ಪ್ರಕ್ರಿಯೆಯನ್ನು ಪೂರೈಸಲು ನೆರವಾಗುತ್ತಾರೆ. ಸಾಲೋದಗಿಯ ವರದಿಗಳ ಪ್ರಕಾರ, ಈ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಮಂಡಳಿ ಪರೀಕ್ಷೆಯಲ್ಲಿ ಕೂಡ ಉತ್ತಮ ಸಾಧನೆ ಮಾಡುತ್ತಾರೆ. 2017ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ್ದು ಮರಲಭಾವಿಯ ವಿದ್ಯಾರ್ಥಿ. ಆತ ಬಳಿಕ ಸರ್ಕಾರಿ ಆದರ್ಶ ಹೈಸ್ಕೂಲ್‌ಗೆ ಸೇರಿಕೊಂಡ. ಪಿಯುಸಿ ಪರೀಕ್ಷೆಯಲ್ಲೂ ಈ ಮಕ್ಕಳ ಸಾಧನೆ ಉತ್ತಮವಾಗಿದೆ. “ಜಿಲ್ಲೆಯಲ್ಲಿ ಮೊದಲ ಸ್ಥಾನ ಪಡೆದಿದ್ದು ನಮ್ಮ ಶಾಲೆಯ ವಿದ್ಯಾರ್ಥಿ. ಆತ ಆಮೇಲೆ ತಾಳಿಕೋಟೆಯ ಕಾಲೇಜಿನಲ್ಲಿ ಅಧ್ಯಯನ ನಡೆಸಿದ. ಮರಲಭಾವಿ ಜಿಎಚ್‌ಪಿಎಸ್‌ನಲ್ಲಿ ಓದಿದವರು ವೈದ್ಯರು, ಎಂಜಿನಿಯರ್‌ಗಳು, ಪೊಲೀಸ್ ಅಧಿಕಾರಿಗಳು ಹಾಗೂ ಗ್ರಾಮಲೆಕ್ಕಿಗರಾಗಿ ಸೇವೆ ಸಲ್ಲಿಸುತ್ತಿದ್ದಾರೆ,” ಎನ್ನುತ್ತಾರೆ ಸಜ್ಜನ್. ಶಾಲೆ ಮತ್ತು ಹಳೆಯ ವಿದ್ಯಾರ್ಥಿಗಳ ನಡುವಿನ ಬಾಂಧವ್ಯ ಬಲಿಷ್ಠವಾಗಿದೆ ಎನ್ನುವುದಕ್ಕೆ ಇವೆಲ್ಲವೂ ಸೂಚನೆ. ಕಾಂತೇಶ್ ಸೇರಿಸುತ್ತಾರೆ, “ಹಳೆಯ ವಿದ್ಯಾರ್ಥಿಗಳು ವಾರ್ಷಿಕೋತ್ಸವ, ಸ್ವಾತಂತ್ರ್ಯ ದಿನಾಚರಣೆ ಹಾಗೂ ನಾವು ಆಯೋಜಿಸುವ ನಾನಾ ವಿಜ್ಞಾನ ಇಲ್ಲವೇ ಗಣಿತಶಾಸ್ತ್ರದ ಮೇಳದ ಸಂದರ್ಭದಲ್ಲಿ ನೆರವಾಗುತ್ತಾರೆ.” ಪ್ರತಿವರ್ಷ ಕೊನೆಯ ಶಾಲಾ ದಿನದಂದು ಶಾಲಾ ವಾರ್ಷಿಕೋತ್ಸವವನ್ನು ನಡೆಸಲಾಗುತ್ತದೆ. ಸಮುದಾಯದ ಮಂದಿ ಈ ಕಾರ್ಯಕ್ರಮವನ್ನು ಸಂಭ್ರಮದಿಂದ ವೀಕ್ಷಿಸುತ್ತಾರೆ. ಶಾಲೆಯು ಸಮುದಾಯದವರೊಡನೆ ಸಂಬಂಧವನ್ನು ಜತನದಿಂದ ಕಾಪಾಡುತ್ತಿದೆ. “ನಾವು ನಗರಗಳಿಂದ ದೂರ ಇರುವುದರಿಂದ ಇಲ್ಲಿ ಎಲ್ಲವೂ ಸರಳವಾಗಿಯೇ ನಡೆಯುತ್ತದೆ. ಸ್ಥಳೀಯ

ರಾಜಕೀಯವು ಶಾಲೆಯನ್ನು ಪ್ರವೇಶಿಸಲು ನಾವು ಬಿಟ್ಟಿಲ್ಲ, ಎಸ್‌ಡಿಎಂಸಿಯನ್ನು ನೈಜ ಪ್ರಜಾಪ್ರಭುತ್ವ ಮಾದರಿಯಿಂದಲೇ ಚುನಾಯಿಸಲಾಗುತ್ತದೆ" ಎನ್ನುತ್ತಾರೆ ಸಜ್ಜನ್.

ಆದರೆ, ಕೆಲವು ವಿಷಯಗಳು ಶಿಕ್ಷಕರ ಆತಂಕಕ್ಕೆ ಕಾರಣವಾಗಿವೆ. ನೀರಿನಲ್ಲಿರುವ ಅಧಿಕ ಫ್ಲೋರೈಡ್ ಅಂಶ ಹೆಚ್ಚು ಆತಂಕ ಉಂಟುಮಾಡಿದ್ದು, ಆದಷ್ಟು ಬೇಗ ಜಲಶುದ್ಧೀಕರಣ ಘಟಕವನ್ನು ಅಳವಡಿಸಬೇಕು ಎಂದುಕೊಂಡಿದ್ದಾರೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕಾಳಜಿ ಉಳ್ಳವರಾದ್ದರಿಂದ, ಆ ಕೆಲಸ ಆದಷ್ಟು ಬೇಗ ಆಗಲಿದೆ ಎನ್ನುವ ಭರವಸೆ ಅವರಿಗಿದೆ. ಮಕ್ಕಳು ಬೆಳಗ್ಗೆ ಶಾಲೆಗೆ ಬರುವ ಮುನ್ನ ಮನೆಯಲ್ಲಿ ಸೇವಿಸುವ ಆಹಾರ ಅಷ್ಟೇನೂ ಪೌಷ್ಟಿಕವಲ್ಲದೇ ಇರುವುದರಿಂದ ಲಭ್ಯ ದವಸಧಾನ್ಯ ಬಳಸಿಕೊಂಡು ಅತ್ಯುತ್ತಮ ಗುಣಮಟ್ಟದ ಬಿಸಿಯೂಟ ನೀಡಬೇಕೆನ್ನುವುದು ಶಿಕ್ಷಕರ ಆಶಯವಾಗಿದೆ. ಆಡಳಿತಾತ್ಮಕ ಕೆಲಸದ ಕಾಗದಪತ್ರಗಳ ನಿರ್ವಹಣೆ ಒತ್ತಡ, ಮಾಹಿತಿಯನ್ನು ಜಾಲತಾಣಕ್ಕೆ ಅಪ್‌ಲೋಡ್ ಮಾಡುವುದು ಕಿರಿಕಿರಿಯ ಕೆಲಸವೇ ಸರಿ. ಮುಖ್ಯ ಶಿಕ್ಷಕರು ಮಾಡಬೇಕಿರುವ ಮಾಹಿತಿಯ ಅಪ್‌ಲೋಡ್ ಸೇರಿದಂತೆ ಆಡಳಿತಾತ್ಮಕ ಕೆಲಸದ ಹೆಚ್ಚಿನ ಪಾಲನ್ನು ಕಾಂತೇಶ್ ಟಿಎಲ್‌ಸಿಯಲ್ಲಿರುವ ಕಂಪ್ಯೂಟರ್‌ನಲ್ಲಿ ಮಾಡುತ್ತಾರೆ. ಉತ್ತಮ ಶಾಲೆಗಳ ಕುರಿತ ಬಹುತೇಕ ಕಥನಗಳು ಒಬ್ಬ ವ್ಯಕ್ತಿ ಇಲ್ಲವೇ ಮುಖ್ಯ ಶಿಕ್ಷಕನ ಸಾಧನೆಯೇ ಆಗಿರುತ್ತದೆ. ಆದರೆ, ಮರಲಭಾವಿಯಲ್ಲಿ ಇಡೀ ತಂಡ ಒಟ್ಟಾಗಿ ಮುನ್ನಡೆಯುತ್ತಿರುವುದೇ ಆ ಶಾಲೆಯ ವೈಶಿಷ್ಟ್ಯವಾಗಿದೆ.